**ಕರ್ನಾಟಕ ಸರ್ಕಾರ** **ಸಿಆರ್‌ಪಿ.67**

**ಹೇಳಿಕೆ ಹಾಳೆ**
**ಆರ್‌ಪಿ.ಸಂ.57**
**ನಮೂನೆ ಸಂ.4**
**(ಸಿವಿಲ್)**

**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, (ಎಂ.ಎ.ಸಿ.ಟಿ.) ಕುಂದಾಪುರ.**

**ಎಂ. ವಿ. ಸಿ. ಸಂಖ್ಯೆ: 424-19 ಆರ್ ಡಬ್ಲ್ಯೂ:2**

**ಸಾಕ್ಷಿದಾರರ ಹೆಸರು** : ಸುಬ್ರಹ್ಮಣ್ಯ
**ತಂದೆ ಹೆಸರು** : ಮಂಜುನಾಥ ಕೊಠಾರಿ
**ವಯಸ್ಸು** : 36
**ವೃತ್ತಿ** : ಸಿವಿಲ್ ಕಂಟ್ರಾಕ್ಟರ್
**ವಾಸ** : ಸಿದ್ದಾಪುರ

**ದಿಃ 04-03-2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆ:- 2 ನೇ ಎದುರುದಾರ ಪರ ವಕೀಲರಾದ ಶ್ರೀ ಎನ್ ಪಿ ಎನ್ ರವರಿಂದ

ನನಗೆ ಈ ಪ್ರಕರಣದಲ್ಲಿ ದಾಖಲಾತಿ ಹಾಜರುಪಡಿಸಿ ಸಾಕ್ಷ್ಯ ನುಡಿಯಲು ಮಾನ್ಯ ನ್ಯಾಯಾಲಯದಿಂದ ಸಮನ್ಸು ಬಂದಿರುತ್ತದೆ ಅದರಂತೆ ನಾನು ಈ ದಿನ ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ.

ನನ್ನ ಮೂಲ ಚಾಲನಾ ಪರವಾನಿಗೆ ಪತ್ರ ಕಳೆದು ಹೋಗಿರುವುದರಿಂದ ಅದನ್ನು ಈ ದಿನ ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಸಾಧ್ಯವಿಲ್ಲ. ನಾನು ವಾಹನ ಚಾಲನೆ ಮಾಡುವ ಚಾಲನಾ ಪರವಾನಿಗೆ ಪತ್ರ ಹೊಂದಿದ್ದೇನೆ. ಅದನ್ನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲಾ. ಅಪಘಾತದಲ್ಲಿ ಗಾಯಗೊಂಡಿದ್ದೆ ಅಂತ ಹೇಳುವ ದಾಖಲಾತಿಯನ್ನು ಇವತ್ತು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಅಪಘಾತದಲ್ಲಿ ನನಗೆ ಸಣ್ಣ ಪುಟ್ಟ ಗಾಯವಾಗಿದ್ದು, ಶ್ರೀ ದುರ್ಗಾ ಆಸ್ಪತ್ರೆ ಹಾಲಾಡಿಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದೇನೆ ಆ ಬಗ್ಗೆ ನನ್ನ ಹತ್ತಿರ ದಾಖಲಾತಿ ಇಲ್ಲಾ.

2 ನೇ ಎದುರುದಾರರು ಈ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದಾರೆ. ಅನುಮತಿ ನೀಡಲಾಯಿತು.

**<u>ಪಾಟೀ ಸವಾಲುಃ 2ನೇ ಎದ್ರುದಾರ ಪರ ವಕೀಲರಾದ ಶ್ರೀ ಎನ್ ಪಿ ಎನ್ ರವರಿಂದ</u>**

ನಾನು ಪ್ರಥಮ ಚಿಕಿತ್ಸೆ ಪಡೆದುಕೊಂಡ ಬಗ್ಗೆ ದುರ್ಗಾ ಆಸ್ಪತ್ರೆಗೆ ಸ್ವತಹಾ ಹಣ ನಾನು ಸಂದಾಯ ಮಾಡಿಲ್ಲ ಆದರೆ ನನ್ನ ಪರವಾಗಿ ಆ ದಿನ ನಾನು ಗಾಬರಿಗೊಂಡಿದ್ದರಿಂದ ಬೇರೆಯವರು ಹಣ ಸಂದಾಯ ಮಾಡಿರುತ್ತಾರೆ. ದುರ್ಗಾ ಆಸ್ಪತ್ರೆಗೆ ನನ್ನ ಜೊತೆಗೆ 4 ರಿಂದ 5 ಜನ ಬಂದಿದ್ದರು. ಸಾಕ್ಷಿ ಅಪಘಾತ ಸ್ಥಳದಿಂದ ದುರ್ಗಾ ಆಸ್ಪತ್ರೆಗೆ 108 ಅಂಬುಲೆನ್ಸಿನಲ್ಲಿ ಹೋಗಿದ್ದೆವು ಅಂತ ನುಡಿಯುತ್ತಾರೆ. ಸದ್ರಿ ಅಂಬುಲೆನ್ಸು ಯಾರು ಕರೆಸಿದ್ದರು ಅಂತ ನನಗೆ ಹೇಳಲಿಕ್ಕೆ ಬರುವುದಿಲ್ಲ. ಅಂಬುಲೆನ್ಸಿನಲ್ಲಿ ಆ ದಿವಸ ನನ್ನ ಜೊತೆಗೆ ಯಾರು ಯಾರು ಇದ್ದರು ಅಂತ ನನಗೆ ಹೇಳಲಿಕ್ಕೆ ಸಾಧವಿಲ್ಲ. ದುರ್ಗಾ ಆಸ್ಪತ್ರೆಯಲ್ಲಿ ನಾನು ಕೇವಲ ಕಾಲು ಗಂಟೆ ಇದ್ದು ನಂತರ ನಾನು ಮನೆಗೆ ಹೋಗಿರುತ್ತೇನೆ. ದುರ್ಗಾ ಆಸ್ಪತ್ರೆಯಲ್ಲಿ ನನ್ನ ಗಾಯಗಳಿಗೆ ಹೊಲಿಗೆ ಹಾಕಿದ್ದು ಪುರುಷ ವೈದ್ಯರು ಅವರ ಹೆಸರು ನನಗೆ ಗೊತ್ತಿಲ್ಲ. ಈ ಪ್ರಕರಣದ ಅರ್ಜಿದಾರ ನನ್ನ ಸಂಬಂಧಿಕನಾಗಿರುತ್ತಾನೆ. ಅವನು ನಮ್ಮ ಮನೆಯ ಕಾರ್ಯಕ್ರಮಕ್ಕೆ ಬಂದು ವಾಪಾಸು ಹೋಗುವಾಗ ಅಪಘಾತ ಆಗಿರುತ್ತದೆ ಎಂದರೆ ಸಾಕ್ಷಿ ನಾನು ಮೋಟಾರು ಸೈಕಲು ಚಲಾಯಿಸುತ್ತಿದ್ದೆ ಅವನು ನನ್ನ ಜೊತೆಗೆ ಬೈಕಿನಲ್ಲಿದ್ದ ಅಂತ ನುಡಿಯುತ್ತಾರೆ. ಅರ್ಜಿದಾರ ನಮ್ಮ ಮನೆಗೆ ಬಸ್ಸಿನಲ್ಲಿ ಬಂದಿದ್ದ. ನಾವು ನಮ್ಮ ಮನೆಯಿಂದ ರಾತ್ರಿ 10.25 ಹೊರಟಿದ್ದು 10.30 ಗಂಟೆಗೆ ಅಪಘಾತ ಆಗಿರುತ್ತದೆ. ನನ್ನ ಸಂಬಂಧಿ ಅರ್ಜಿದಾರನಿಗೆ ದುರ್ಗಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿ ಅವನನ್ನು ಮಣಿಪಾಲ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ವೈದ್ಯರು ಸೂಚಿಸುವವರೆಗೆ ನಾನು ಅವನ ಜೊತೆಯಲ್ಲೇ ದುರ್ಗಾ ಆಸ್ಪತ್ರೆಯಲ್ಲಿದ್ದೆ. ಸದ್ರಿ ಅಂಬುಲೆನ್ಸಿನಲ್ಲಿ ನಾನು ಮತ್ತು ಇಬ್ಬರು ಸೇರಿಕೊಂಡು ಅರ್ಜಿದಾರರನ್ನು ಮಣಿಪಾಲ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು. ನಿಆರ್-1 ರಲ್ಲಿನ ಪುಟ ಸಂಖ್ಯೆ 19ರಲ್ಲಿ ಇದ್ದ ಸಾಕ್ಷಿಯ ಸಹಿಯನ್ನು ಸಾಕ್ಷಿ ಗುರುತಿಸಿದ್ದು, ಸದ್ರಿ ಪ್ರಥಮವಾಗಿ ವೈದ್ಯರು ಪಡೆದುಕೊಂಡ ಮಾಹಿತಿ ದಾಖಲೆಯಾಗಿದ್ದು, ಸದ್ರಿ ದಾಖಲಾತಿಯನ್ನು ನಿಆರ್-1(ಎ) ಎಂದು ಗುರುತಿಸಲಾಯಿತು. ಅದರಲ್ಲಿದ್ದ ಸಾಕ್ಷಿ ಸಹಿಯನ್ನು ನಿಆರ್-1(ಬಿ) ಎಂದು ಗುರುತಿಸಲಾಯಿತು. ನಿಆರ್-1(ಎ) ದಲ್ಲಿ ವೈದ್ಯರಿಗೆ ನಾನು ನೀಡಿದ ಮಾಹಿತಿಯಂತೆ ಮೋಟಾರು ಸೈಕಲು ಸ್ಕಿಡ್ಡಾಗಿ ಬಿದ್ದಿದ್ದ ಅಂತ ಕಾಣಿಸಲಾಗಿದ್ದು, ಅದು ಸರಿ ಇದೆ. ಅದು ನನ್ನ ಮಾಹಿತಿಯಂತೆ ವೈದ್ಯರು ಬರೆದಿರುತ್ತಾರೆ. ಆದರೆ ಸಮಯ ನಾನು 10.30 ಅಂತ ಹೇಳಿದ್ದು, ಅವರು 10.00 ಅಂತ

ತಪ್ಪಾಗಿ ಕಾಣಿಸಿದ್ದಾರೆ ಅಂತ ನುಡಿಯುತ್ತಾರೆ. ನಾನು ಮಣಿಪಾಲ ಆಸ್ಪತ್ರೆಗೆ ಹೋದ ಸಮಯದಲ್ಲಿ ನನ್ನ ಬಲಬದಿಯ ಹಣೆಯ ಮೇಲೆ ಎರಡು ಹೊಲಿಗೆ ಹಾಕಿದ್ದು ಬಿಟ್ಟರೆ ಯಾವುದೇ ಬ್ಯಾಂಡೇಜ್ ಹಾಕಿರಲಿಲ್ಲ ಮತ್ತು ನನ್ನ ಎಡಕೈಗೆ ತರಚಿದ ಗಾಯ ಆಗಿದ್ದು ಅದಕ್ಕೂ ಸಹಾ ಯಾವುದೇ ಬ್ಯಾಂಡೇಜು ಹಾಕಿರಲಿಲ್ಲ. ಮಣಿಪಾಲ ಆಸ್ಪತ್ರೆಗೆ ನಮ್ಮ ಜೊತೆಗೆ ಬಂದಿದ್ದ ಇಬ್ಬರ ಹೆಸರು ಒಂದು ಅರುಣ್ ಇನ್ನೊಬ್ಬನ ಹೆಸರು ಗೊತ್ತಿಲ್ಲ. ಅಪಘಾತ ಆಯಿತು ಅಂತ ಹೇಳುವ ಸಮಯದಲ್ಲಿ ನಾನು ಪೋಲೀಸರಿಗೆ ಫೋನ್ ಮಾಡಿಲ್ಲ. ಸಂತೋಷ ಶೆಟ್ಟಿ, ಬಿನ್ಃ ರಾಜು ಶೆಟ್ಟಿ ಇವರ ಪರಿಚಯ ನನಗೆ ಇದೆ. ಅವರು ಅಪಘಾತ ಸಮಯದಲ್ಲಿ ಘಟನಾ ಸ್ಥಳದಲ್ಲಿ ಬೇರೆ ವಾಹನದಲ್ಲಿ ಬರುತ್ತಾ ಇದ್ದರು ಮತ್ತು ಸ್ಥಳದಲ್ಲಿದ್ದರು. **4** ದಿವಸ ನಂತರ ಪೋಲೀಸರು ನನಗೆ ಫೋನ್ ಮಾಡಿ ಠಾಣೆಗೆ ಬರಲು ತಿಳಿಸಿದ್ದರು. ನಾನು ದಿಃ**09-11-2018** ರಂದು ಮಧ್ಯಾಹ್ನ **3.00** ಗಂಟೆಗೆ ಪೋಲೀಸು ಠಾಣೆಗೆ ಹೋಗಿದ್ದೇನೆ. ನಾನು ಹೋದಾಗ ಸಂತೋಷ ಶೆಟ್ಟಿ ಸಹಾ ಅಲ್ಲಿಗೆ ಬಂದಿದ್ದ. ಆ ಸಮಯದಲ್ಲಿ ಪೋಲೀಸರು ನನ್ನ ಸಹಿ ಪಡೆದುಕೊಂಡಿದ್ದಾರೋ ಇಲ್ಲವೋ ಎಂದು ನನಗೆ ನೆನಪಿಲ್ಲ. ಅದೇ ದಿವಸ ನನ್ನ ಮೇಲೆ ಪೋಲೀಸರು ಪ್ರಕರಣ ದಾಖಲು ಮಾಡಿದ್ದು, ನನ್ನನ್ನು ವಶಕ್ಕೆ ಪಡೆದುಕೊಂಡಿಲ್ಲ. ನಾನು ಠಾಣೆಗೆ ಹೋಗುವ ಸಮಯದಲ್ಲಿ ನನ್ನ ಗಾಯಕ್ಕೆ ಹಾಕಿದಂತಹಾ ಹೊಲಿಗೆ ಹಾಗೆಯೇ ಇತ್ತು ಅದನ್ನು ತೆಗೆಯಲಾಗಿರಲಿಲ್ಲ. ನಾನು ದಿಃ**09-11-2018** ಕ್ಕೆ ಮತ್ತು **10-11-2018** ಕ್ಕೆ ಠಾಣೆಗೆ ಹೋಗಿದ್ದೇನೆ. ದಿಃ**05-11-2018** ಕ್ಕೆ ಅಪಘಾತ ಆಗುವ ಸಮಯದಲ್ಲಿ ನಾನು ಅಪಘಾತ ಸ್ಥಳದಲ್ಲಿ ಇರಲೇ ಇಲ್ಲಾ ಎಂದರೆ ಸರಿ ಅಲ್ಲಾ. ಅರ್ಜದಾರ ತನ್ನ ರಾಯಲ್ ಎನ್‌ಫೀಲ್ಡ ಮೋಟಾರು ಸೈಕಲ್ ನಂಬ್ರ ಕೆಎ-**20**-ಇಜಿ-**1523** ಇದನ್ನು ತಾನೇ ಚಲಾಯಿಸಿಕೊಂಡು ಹೋಗಿ ಅಪಘಾತಪಡಿಸಿಕೊಂಡಿದ್ದಾನೆ ಎಂದರೆ ಸರಿ ಅಲ್ಲಾ. ನಂತರ ನಾನು ಅರ್ಜಿದಾರ ಅನೂಪ್ ಇವನ ಸಂಬಂಧಿಯಾಗಿದ್ದು ಓರ್ವ ಪರಿಚಯ ವ್ಯಕ್ತಿ ಸಂತೋಷ ಶೆಟ್ಟಿ ಮತ್ತು ಸಂತೋಷ ಪೂಜಾರಿ ಇವರೊಂದಿಗೆ ಸೇರಿಕೊಂಡು ದಿಃ**09-11-2018** ಕ್ಕೆ ಠಾಣೆಗೆ ಹೋಗಿ ಅನೂಪ್ ಇವನು ಸಂತೋಷ ಪೂಜಾರಿಯವರಿಗೆ ಸೇರಿದ ಕೆಎ-**20**-ಇಜೆ-**6408** ವಾಹನವನ್ನು ನಾನು ಚಲಾಯಿಸುವಾಗ ಹಿಂಬದಿ ಸವಾರನಾಗಿದ್ದು ಅಪಘಾತಕ್ಕೆ ಒಳಪಟ್ಟಿದ್ದಾನೆ ಅಂತ ಸುಳ್ಳು ದೂರನ್ನು ದಾಖಲಿಸಿದ್ದೇವೆ ಎಂದರೆ ಸರಿ ಅಲ್ಲಾ. ದಿಃ**09-11-2018** ಕ್ಕೆ ಆಗಲೀ ದಿಃ**10-11-2018** ಕ್ಕೆ ಆಗಲೀ ನಾನು ಯಾವತ್ತೂ ಪೋಲೀಸು ಠಾಣೆಗೆ ಭೇಟಿ ಕೊಡಲೇ ಇಲ್ಲಾ ಎಂದರೆ ಸರಿ ಅಲ್ಲಾ. ನಾನು ಅನೂಪನಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಮೋಟಾರು ಸೈಕಲು

ಚಲಾಯಿಸುತ್ತಿದ್ದೆ ಅಂತ ಕತೆ ಕಟ್ಟಿ ನನ್ನ ಮೋಟಾರು ಸೈಕಲು ಅಪಘಾತಕ್ಕೆ ಒಳಪಟ್ಟು ಅದರಲ್ಲಿ ಹಿಂಬದಿ ಸವಾರನಾದ ಅರ್ಜಿದಾರ ಅನೂಪನಿಗೆ ಪೆಟ್ಟಾಯಿತು ಅಂತ ಸುಳ್ಳು ಪ್ರಕರಣ ದಾಖಲಾಗುವಂತೆ ಮಾಡಿ ಸದ್ರಿ ತಪ್ಪನ್ನು ಒಪ್ಪಿ ದಂಡವನ್ನು ತುಂಬಿರುತ್ತೇನೆ ಎಂದರೆ ಸರಿ ಅಲ್ಲಾ. ಅಪಘಾತ ಸ್ತಳದಲ್ಲಿದ್ದ ರಾಯಲ್ ಎನ್ ಫೀಲ್ಡ ಮೋಟಾರು ಸೈಕಲನ್ನು ತೆಗೆದು ನಮಗೆ ಅನುಕೂಲವಾಗುವಂತೆ ಹೀರೋ ಹೊಂಡಾ ಫ್ಯಾಶನ್ ಪ್ರೊ ಬೈಕನ್ನು ಸ್ತಳದಲ್ಲಿಟ್ಟು ಪ್ರಕರಣ ಸೃಷ್ಟಿಸಿದ್ದೇವೆ ಎಂದರೆ ಸರಿ ಅಲ್ಲಾ. ನಮಗೆ ಅನುಕೂಲವಾಗುವಂತೆ 4 ದಿನ ಬಿಟ್ಟು ನಾವೆಲ್ಲಾ ಸೇರಿ ಒಂದು ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿ ಅಲ್ಲಾ.

**ಪಾಟೀ ಸವಾಲುಃ** ಅರ್ಜಿದಾರ ಪರ ವಕೀಲರು ಪಾಟೀ ಸವಾಲು ಇಲ್ಲಾ ಅಂತ ಹೇಳಿದ್ದರಿಂದ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**(ಎಂ.ಎ.ಸಿ.ಟಿ.) ಕುಂದಾಪುರ**